2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 10/2021</u>

| | | |
|---|---|---|
| ಸಾಕ್ಷಿದಾರರ ಹೆಸರು | - ಮಹಮದ್ ರಫೀಕ್ | ಪಿಡಬ್ಲೂ - 07 |
| ತಂದೆಯ ಹೆಸರು | - ಮುಜೀಬ್ | ಸಿಡಬ್ಲೂ - 30 |
| ವಯಸ್ಸು | - 40 ವರ್ಷ | |
| ಉದ್ಯೋಗ | - ವೃತ್ತ ನಿರೀಕ್ಷಕರು, ಕಡೂರು ವೃತ್ತ | |
| ವಾಸ ಸ್ಥಳ | - ಕಡೂರು | |

ದಿನಾಂಕಃ **23.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ಆಗಸ್ಟ 2018 ರಿಂದ ನವಂಬರ್ 2019 ರವರೆಗೆ ಅಜ್ಜಂಪುರ ಠಾಣೆಯಲ್ಲಿ ಪೋಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 17.10.2019 ರಂದು ಸಂಜೆ 6.00 ಗಂಟೆಗೆ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಮೊಕದ್ದಮೆ ದಾಖಲಿಸಿ ನ್ಯಾಯಾಲಯಕ್ಕೆ ಪ್ರವವ ಸಲ್ಲಿಸಿದ್ದೇನೆ. ಸದರಿ ದೂರನ್ನು ನಿಪಿ.1 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಇ) ಎಂದು ಗುರುತಿಸಲಾಯಿತು. ಪ್ರವವ ನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಮುಂದಿನ ತನಿಖೆಯನ್ನು ಚಾಸಾ.31 ರವರಿಗೆ ವರ್ಗಾಯಿಸಿದ್ದೇನೆ.

<u>ಪಾಟೀ ಸವಾಲು: ಶ್ರೀ.ಎನ್.ಹೆಚ್.ವೈ., ವಕೀಲರಿಂದ ಆರೋಪಿಯ ಪರವಾಗಿ</u>

3. ನಿಪಿ.1 ದೂರನ್ನು ಚಾಸಾ.1 ರವರು ಎಲ್ಲಿ ಹೇಗೆ ತಯಾರಿಸಿದರು ಎಂದು ನನಗೆ ಮಾಹಿತಿ ಇಲ್ಲ. ನಿಪಿ.1 ದೂರು ಸ್ವೀಕರಿಸುವ ಮೊದಲು ನನ್ನ ಅವಧಿಯಲ್ಲಿ ತಬರಕ್ ಬಾನು ಮರಣಹೊಂದಿದ ಬಗ್ಗೆ ಬೇರೆ ಮಾಹಿತಿ ಬಂದಿರಲಿಲ್ಲ. ದೂರು ಸ್ವೀಕರಿಸಿದ ತಕ್ಷಣ ನಾನು ಘಟನಾ ಸ್ಥಳಕ್ಕೆ ಬೇಟಿ

ನೀಡಿರುವುದಿಲ್ಲ. ಮೃತಳು ಮರಣಹೊಂದಿದ ಸ್ಥಳ ಮತ್ತು ಮೃತಳನ್ನು ಹೂತ ಸ್ಥಳಕ್ಕೆ ನಾನು ಬೇಟಿ ನೀಡಿರಲಿಲ್ಲ. ದೂರಿನಲ್ಲಿ ಮಾಹಿತಿಯನ್ನು ಪರಿಶೀಲಿಸದೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ